ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಖಂಡ 1 ರಿಂದ 2 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆದ ವಿಧೇಯಕ ಭಾಗವಾಗಿರುತ್ತದೆ.)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, " 2009ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ಸೂಚಿಸಲಾಯಿತು.

ಊ) ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2009
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್. ಯರಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : " 2009ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 1 ರಿಂದ 2 ರವರೆಗೆ

ಅಧ್ಯಕ್ಷರು : "ಖಂಡ 1 ರಿಂದ 2 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 1 ರಿಂದ 2 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆದ ವಿಧೇಯಕ ಭಾಗವಾಗಿರುತ್ತದೆ.)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, " 2009ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ಸೂಚಿಸಲಾಯಿತು.

ಊ) ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, 2009
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖಾ ಸಚಿವರು (ಕಂದಾಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2009ರ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಡಿ.ಕೆಶಿವಕುಮಾರ್ :- ಸದರಿ ಬಿಲ್ ಬಗ್ಗೆ explain ಮಾಡಿ.

ಅಧ್ಯಕ್ಷರು :- ಇದು ಬಜೆಟ್‌ಗೆ ಪೂರಕವಾದಂಥ ಬಿಲ್.

ಶ್ರೀ ಟಿ.ಬಿ.ಜಯಚಂದ್ರ :- Fiscal Responsibility Bill ಬಜೆಟ್‌ಗೆ ಪೂರಕವಾಗಿರುತ್ತದೆಯೇ? What does it mean? ಈಗ Fiscal Responsibility bill ತರತಕ್ಕಂಥ ಉದ್ದೇಶ ಏನು? ಏನೋ ಒಂದು ಡಿಸಿಪ್ಲಿನ್ ತರಬೇಕೆಂಬ ಉದ್ದೇಶದಿಂದ ಇದನ್ನು ತರಲಾಗುತ್ತದೆ. ನೀವು ಅದನ್ನೇ ಅಮೆಂಡ್‌ಮೆಂಟ್ ಮಾಡಿಕೊಂಡರೆ ಹೇಗೆ? One time measure ಎಂದು 3.5%ನವರೆಗೆ ಏರಿಸುತ್ತೇನೆಂದು ಹೇಳಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಇಲಾಖೆ ಸಚಿವರು) :- ಕೇಂದ್ರ ಸರ್ಕಾರದವರು ರಾಜ್ಯಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. 3.5% ಇರತಕ್ಕಂಥದ್ದನ್ನು.

ಶ್ರೀ ಟಿ.ಬಿ.ಜಯಚಂದ್ರ :- ನಿಮ್ಮ statement of reason ನಲ್ಲಿ ಅದನ್ನು ತೋರಿಸಿದ್ದೀರಾ?

ಮುಖ್ಯಮಂತ್ರಿಗಳು :- ಪ್ರತಿವರ್ಷ ಇದನ್ನೇ ಮಂಡನೆ ಮಾಡಿಕೊಂಡು ಬರಲಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ :- 3.5% ಇರತಕ್ಕಂಥದ್ದನ್ನು ರಿಲಾಕ್ಸ್ ಮಾಡಬಹುದೆಂದು ರಾಜ್ಯ ಸರ್ಕಾರಕ್ಕೆ ಕೇಂದ್ರ ಬಜೆಟ್‌ನಲ್ಲಿ ಬಹಳ ಸ್ಪಷ್ಟವಾಗಿ ಸೂಚನೆ ಕೊಟ್ಟಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ :- ಅದನ್ನು ನೀವು ಇದರಲ್ಲಿ ಏಕೆ ಹೇಳಲಿಲ್ಲ?

ಶ್ರೀ ಬಸವರಾಜ ಬೊಮ್ಮಾಯಿ :- ಭಾಷಣದಲ್ಲಿಯೇ ಇದರ ಬಗ್ಗೆ ಹೇಳಿದ್ದಾರೆ. ಮತ್ತೆ ಇದು one time measure and this is for current year.

ಶ್ರೀ ಟಿ.ಬಿ.ಜಯಚಂದ್ರ :- One time, one time ಎಂದು ಇದು ಹೋಗುತ್ತಲೇ ಇರುತ್ತದೆ...

ಶ್ರೀ ಬಸವರಾಜ ಬೊಮ್ಮಾಯಿ :- ಇದನ್ನು ನಾವು ಮಾಡಿಲ್ಲ. It is under the direction of the Government of India. It has allowed the

State. It has relaxed the Financial Discipline Bill. As per their direction we have done it.

ಶ್ರೀ ಡಿ.ಕೆಶಿವಕುಮಾರ್ :– ಬಿಲ್ ಬಗ್ಗೆ ಬ್ರೀಫ್ ಮಾಡಿ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ ಸಚಿವರು) :– ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿಯನ್ನು ತಂದಿರುವ ಉದ್ದೇಶ ಏನೆಂದರೆ, ಕ್ರಯ, ಪರಭಾರೆ ಮತ್ತು ವರ್ಗಾವಣೆಗೆ ಮುದ್ರಾಂಕ ಶುಲ್ಕ ಶೇ.7.5 ರಿಂದ ಶೇ.6ಕ್ಕೆ ನಾವು ಇಳಿಸುತ್ತಿದ್ದೇವೆ. ಇದರಿಂದ ಎಲ್ಲಾ ವರ್ಗದ ಜನರಿಗೆ ಪ್ರಯೋಜನವಾಗುತ್ತಿದೆ. ಗುತ್ತಿದೆ ಪತ್ರದ ಮೇಲೆ ಮುದ್ರಾಂಕ ಶುಲ್ಕದ ಸರಳೀಕರಣದಿಂದ ಮತ್ತು ಕಡಿಮೆ ಮಾಡಿರುವುದರಿಂದ ಇನ್ನು ಮೇಲೆ ರಿಜಿಸ್ಟ್ರೇಷನ್ ಜಾಸ್ತಿಯಾಗುತ್ತದೆ. ಮಾಲೀಕರಿಗೆ ಮತ್ತು ಬಾಡಿಗೆದಾರರಿಗೆ ವಿಶೇಷವಾದಂಥ ಒಂದು ಬದ್ಧತೆ ಬರುತ್ತದೆ. ಪರವಾನಿಗೆಯಲ್ಲಿ ಸರಳೀಕರಣ ಮತ್ತು ಮುದ್ರಾಂಕ ಶುಲ್ಕ ಕಡಿಮೆ ಮಾಡಿರುವುದರಿಂದ, ಸಾಮಾನ್ಯ ಜನಕ್ಕೆ ಇನ್ನಷ್ಟು ಉಪಯೋಗವಾಗುತ್ತದೆ. ದಾನಪತ್ರದಲ್ಲಿ ಆರ್ಟಿಕಲ್ 28 ವ್ಯವಸ್ಥಾ ಪತ್ರ ಕುಟುಂಬ ವ್ಯಾಪ್ತಿಯಲ್ಲಿ ತಂದೆ–ತಾಯಿಯನ್ನು ಸೇರಿಸಿರುವುದರಿಂದ, ಮಕ್ಕಳಿಂದ ದಾನ ಅಥವಾ ವ್ಯವಸ್ಥಾ ಪತ್ರದ ಮೇಲೆ ಮುದ್ರಾಂಕ ಶುಲ್ಕದ ರಿಯಾಯಿತಿ ಲಾಭ ಪಡೆಯಬಹುದಾಗಿದೆ. ಇದು ಮೊದಲು ಇರಲಿಲ್ಲ. ಅನುಚ್ಛೇಧ 45 (ಬಿ)ಯಲ್ಲಿ ಹಕ್ಕು ಬಿಡುಗಡೆ ಪತ್ರ, ಅಂದರೆ, ಕುಟುಂಬ ವ್ಯಾಪ್ತಿಯಲ್ಲಿ ಮೃತ ಸಹೋದರನ ಹೆಂಡತಿ ಮತ್ತು ಮಕ್ಕಳು ಸೇರಿಸಿರುವುದರಿಂದ ಮುದ್ರಾಂಕ ರಿಯಾಯತಿ ಲಾಭವನ್ನು ಪಡೆಯಬಹುದಾಗಿದೆ. See, just to simplify and to expand.

ಶ್ರೀ ಡಿ.ಕೆಶಿವಕುಮಾರ್ :– Expand ಮಾಡಿರತಕ್ಕಂಥದ್ದರಲ್ಲಿ ತಮ್ಮನ ಬದಲು ತಮ್ಮನ ಹೆಂಡತಿಯನ್ನು ಕೂಡ ಸೇರಿಸಿದ್ದೀರಲ್ಲವೇ?

ಶ್ರೀ ಎಸ್.ಸುರೇಶ್ ಕುಮಾರ್ :– ಸೇರಿಸಿದ್ದೇವೆ.

ಶ್ರೀ ಡಿ.ಕೆಶಿವಕುಮಾರ್ :– That is a family. Brother and Sister ಬದಲು..

ಶ್ರೀ ಎಸ್.ಸುರೇಶ್ ಕುಮಾರ್ :– ಫ್ಯಾಮಿಲಿಯಲ್ಲಿ ಇದನ್ನು ಅಡಿಷನಲ್ ಆಗಿ ಸೇರಿಸಲಾಗಿದೆ.

ಊ) <u>ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, 2009</u>

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

" 2009ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>